❖ ಪ್ರಶಾಂತ ಭಟ್ ಹೆಗ್ಗಾರ್

## ತುಲಾ




ತಿಂಗಳ ಆರಂಭದಲ್ಲಿ ಬಹಳ ಮುಖ್ಯವಾದ ಸಂದೇಶ ಪಡೆಯುವಿರಿ. ಸ್ನೇಹಿತರೊಂದಿಗೆ ಮೋಜಿನ ಕ್ಷಣಗಳನ್ನು ಕಳೆಯಲು ಸಿದ್ಧರಾಗಿ. ತಿಂಗಳ ಕೊನೆಯಲ್ಲಿ ನಿಮ್ಮ ಮೇಲಿನ ನಿರೀಕ್ಷೆಗಳು ಸಾಕಷ್ಟು ಹೆಚ್ಚಲಿವೆ.

**ಶುಭ:** 7, 8, 16, 20, 21

**ಅಶುಭ:** 3, 4, 6, 26, 28

## ಮಕರ




ತಿಂಗಳ ಆರಂಭದಲ್ಲಿ ಸಹೋದ್ಯೋಗಿಗಳಿಂದ, ಮೇಲಧಿಕಾರಿಗಳಿಂದ ಮೆಚ್ಚುಗೆ ಪಡೆಯುವಿರಿ. ಇದರಿಂದ ನಿಮ್ಮ ಸ್ವಾಭಿಮಾನ ಹೆಚ್ಚಲಿದೆ. ಆದಾಗ್ಯೂ, ನಿಮ್ಮ ಭಾವನೆಗಳಲ್ಲಿ ಏರಿಳಿತಗಳು ಉಂಟಾಗುವ ಸಮಯವಿದು. ತಾಳ್ಮೆಯಿಂದಿರಿ.

**ಶುಭ:** 1, 15, 19, 22, 26

**ಅಶುಭ:** 3, 9, 14, 28, 30

## ವೃಶ್ಚಿಕ



ಮನೆಯ ಖರ್ಚು–ವೆಚ್ಚದ ಮೇಲೆ ಗಮನವಿರಲಿ; ವಿಶೇಷವಾಗಿ ತಿಂಗಳ ದ್ವಿತೀಯಾರ್ಧದಲ್ಲಿ. ನಿಮಗೀಗ ಕೆಲವು ದಿನಗಳ ಪ್ರವಾಸ ಅಥವಾ ವಿಶ್ರಾಂತಿಯ ಅಗತ್ಯವಿದೆ. ಪ್ರವಾಸಕ್ಕೆ 14ರಿಂದ 21 ಸೂಕ್ತ ಸಮಯ.

**ಶುಭ:** 5, 10, 20, 21, 23

**ಅಶುಭ:** 6, 7, 9, 27, 28

## ಕುಂಭ




ಈ ಮಾಸ ನಿಮಗೆ ಅತ್ಯಂತ ಸಕ್ರಿಯ ಮತ್ತು ಚಟುವಟಿಕೆಯ ತಿಂಗಳಾಗಲಿದೆ. ಎರಡನೇ ವಾರದಲ್ಲಿ ಕುಟುಂಬದ ಸದಸ್ಯರಿಗೆ ವಿಶೇಷ ಗಮನ ಕೊಡಿ. ತಿಂಗಳ ಮಧ್ಯದಲ್ಲಿ ಸೃಜನಶೀಲ ಕೌಶಲ್ಯಗಳು ವೃದ್ಧಿಸಲಿವೆ.

**ಶುಭ:** 3, 18, 23, 24, 26

**ಅಶುಭ:** 4, 7, 10, 14, 19

## ಧನಸ್ಸು




ವೃತ್ತಿಜೀವನಕ್ಕೆ ಹೆಚ್ಚಿನ ಗಮನ ಕೊಡಿ. ಕೆಲ ದಿನ ಸಾಮಾಜಿಕ ಜೀವನದಿಂದ ಅಂತರ ಕಾಯ್ದುಕೊಳ್ಳುವುದು ಉತ್ತಮ. ನಿಮ್ಮ ಕೆಲಸದ ವೈಖರಿ, ಬದ್ಧತೆ ಮತ್ತು ಕೌಶಲಗಳನ್ನು ಮೇಲಿನವರು ಗಮನಿಸುತ್ತಿದ್ದಾರೆ.

**ಶುಭ:** 4, 13, 22, 26, 28

**ಅಶುಭ:** 3, 6, 11, 16, 18

## ಮೀನ



ಬಹಳ ಗಂಭೀರವಾದ ಕಾರ್ಯವನ್ನು ಕೈಗೊಳ್ಳುವಿರಿ. ಇದರಿಂದ ವಿಶ್ರಾಂತಿ, ಮನರಂಜನೆ ಹಾಗೂ ಕುಟುಂಬಕ್ಕೆ ಸಮಯ ಸಿಗದು. ಆದರೆ, ನಿಮ್ಮ ಆರೋಗ್ಯ, ಯೋಗಕ್ಷೇಮದ ಬಗೆಗೂ ಗಮನ ನೀಡುವುದು ಉತ್ತಮ.

**ಶುಭ:** 4, 9, 11, 21, 29

**ಅಶುಭ:** 5, 8, 16, 17, 30